ಲಲಿತ ಮಂಟಪ

# ಅಭಿನಯ ಭಾಷೆಗಿಂತಲೂ ಮಿಗಿಲಾಗಿ ಸ್ಪಷ್ಟವಾಗಿ ಅರ್ಥವಾಗುವಂತಿರಬೇಕು

ಭರತನಾಟ್ಯ, ಮೋಹಿನಿಯಾಟ್ಟಂ, ಕೂಚಿಪುಡಿ, ಕಥಕಳಿ ಹಾಗೂ ದೇವಾಲಯ ನೃತ್ಯದಲ್ಲಿ ಪರಿಣತಿ ಪಡೆದ ಕರ್ನಾಟಕದ ಏಕೈಕ ಕಲಾವಿದೆ ಗುರು ಕಲಾಮಂಡಲಂ ಉಷಾ ದಾತಾರ್. ಕೇರಳದ 'ಕಲಾಮಂಡಲಂ' ಗುರುಕುಲದಲ್ಲಿ ನೃತ್ಯ ಅಭ್ಯಾಸ ಮಾಡಿದ ಕನ್ನಡಿತಿ. ಬದುಕಿನ ಪಾಠಶಾಲೆಯಲ್ಲಿ ಸದಾ ವಿದ್ಯಾರ್ಥಿನಿಯಾಗಿಯೇ ಇರುತ್ತೇನೆ ಎಂದು ನಂಬಿದವರು. 76 ವರ್ಷದ ಉಷಾ ದಾತಾರ್ ಇಂದಿಗೂ ಅಭ್ಯಾಸಿ ದಿರಿಸು ಧರಿಸಿ ಪ್ರತಿದಿನ ನೃತ್ಯ ಮಾಡಿದರೆ ಮಾತ್ರ ಗುರುಋಣವನ್ನು ಕೊಂಚವಾದರೂ ಸಲ್ಲಿಸಿದಂತಾಗುತ್ತದೆ ಎನ್ನುತ್ತಾರೆ. ಬೆಂಗಳೂರಿಗೆ ಮೊತ್ತಮೊದಲು ಮೋಹಿನಿಯಾಟ್ಟಂ ನೃತ್ಯವನ್ನು ಪರಿಚಯಿಸಿದ ಈ ಅಪ್ರತಿಮ ನೃತ್ಯಪಟು, ಆಂಧ್ರಪ್ರದೇಶದಲ್ಲಿ ದೇವದಾಸಿಯರಿಂದಲೇ ದೇವಾಲಯ ನೃತ್ಯವನ್ನು ಕಲಿತವರು. ಬೆಂಗಳೂರು ವಿಶ್ವವಿದ್ಯಾಲಯದ ನೃತ್ಯ ನಾಟಕ ಸಂಗೀತ ವಿಭಾಗದಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿರುವ ಅವರು, 'ದಾತಾರ್ ಇನ್‌ಸ್ಟಿಟ್ಯೂಟ್ ಆಫ್ ಫೈನ್ ಆರ್ಟ್ಸ್' ಸ್ಥಾಪಿಸಿ ನೂರಾರು ವಿದ್ಯಾರ್ಥಿಗಳಿಗೆ ಕಲಾಶಿಕ್ಷಣ ನೀಡುತ್ತಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ, ನಾಟ್ಯರಾಣಿ ಶಾಂತಲಾ ಪ್ರಶಸ್ತಿ ಸೇರಿದಂತೆ ಅನೇಕ ಗೌರವ ಪುರಸ್ಕಾರಗಳು ಅವರನ್ನು ಅರಸಿಕೊಂಡು ಬಂದಿವೆ. ಅವರೊಡನೆ 'ಮಯೂರ'ಕ್ಕಾಗಿ ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.

**ಕೋಡಿಬೆಟ್ಟು ರಾಜಲಕ್ಷ್ಮಿ**